<u>ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.</u>

**O.S. No.81/2018. DW.-1.**

ದಿನಾಂಕ:**25.02.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

<u>ಮು. ಪಾಟೀ ಸವಾಲು:</u> ವಾದಿಯರ ಪರ ಶ್ರೀ ವೈ ಟಿ ಎಂ ವಕೀಲರಿಂದ:-

ದಾವಾ ಸ್ವತ್ತಿನ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ದಾವಾ ಸ್ವತ್ತು 1ನೇ ಪ್ರತಿವಾದಿಗೆ ಸರ್ಕಾರದಿಂದ ಮಾಜೂರು ಆಗಿರುತ್ತದೆ. ಸದರಿ ಮಂಜೂರಾತಿ ಪತ್ರ ನಾನು ನೋಡಿದ್ದೇನೆ. 1ನೇ ಪ್ರತಿವಾದಿ ಮತ್ತು ವಾದಿಗಳು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿದವರು ಎಂದರೆ ಸರಿ. ಮಂಜೂರಾತಿ ಪತ್ರದಲ್ಲಿ 7ನೇ ಷರತ್ತಿನಂತೆ ಮಂಜೂರು ಪಡೆದಿರುವ ಸ್ವಂತ ವಾಸಕ್ಕೆ ಮಾತ್ರ ಉಪಯೋಗಿಸುವುದು ಎಂದು ಷರತ್ತು ಇದೆ ಎಂದರೆ ನಾನು ಅದನ್ನು ಓದಿಲ್ಲ, ಸದರಿ ಸ್ವತ್ತನ್ನು ನನ್ನ ತಂದೆ ಖರೀದಿಸಿದ್ದಾರೆ. 1ನೇ ಪ್ರತಿವಾದಿಗೆ ವಾಸಕ್ಕೆ ಜಾಗ ಇಲ್ಲ ಎಂದು ಸರ್ಕಾರದಿಂದ ದಾವಾ ಸ್ವತ್ತನ್ನು ಮಂಜೂರು ಮಾಡಲಾಗಿದೆ ಎಂದರೆ ಸರಿ.

1 ರಿಂದ 3ನೇ ಪ್ರತಿವಾದಿಗಳು ಸೇರಿ 4ನೇ ಪ್ರತಿವಾದಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಯು 5ನೇ ಪ್ರತಿವಾದಿ ಸಹ: ಬರೆದುಕೊಟ್ಟಿದ್ದಾರೆ. ದಾವಾ ಸ್ವತ್ತಿನ ಮೇಲೆ 1 ರಿಂದ 3, 5ನೇ ಪ್ರತಿವಾದಿಗಳಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಆಧಿಕಾರ ಇತ್ತು ಎಂದು ಸಹಿ ಹಾಕಿಸಿರುತ್ತೇವೆ ಎಂದರೆ ಸರಿ. ಆದರೆ ಒಟ್ಟು ಕುಟುಂಬದ ಸ್ವತ್ತು ಆಗಿರುವುದಿಲ್ಲ. 1ನೇ ಪ್ರತಿವಾದಿಯ ಸ್ವಯಾರ್ಜಿತ ಸ್ವತ್ತಾಗಿದ್ದ ಪಕ್ಷದಲ್ಲಿ ನಾನು 2, 3, 5ನೇ ಪ್ರತಿವಾದಿಗಳ ಸಹಿ ಪಡೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಒಟ್ಟು ಕುಟುಂಬದ ಆಸ್ತಿಯಾದ ಕಾರಣ ಎಲ್ಲರ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ.

ವಾದಿ, 1 ರಿಂದ 3ನೇ ಪ್ರತಿವಾದಿಗಳು ಮಂಜೂರಾದ ಸಮಯದಲ್ಲಿ ಒಟ್ಟು ಕುಟುಂಬದಲ್ಲಿ ವಾಸವಾಗಿದ್ದು ಅವರು ಸರ್ಕಾರಕ್ಕೆ ಕಿಮ್ಮತ್ತು ಕಟ್ಟಿ ದಾವಾ ಸ್ವತ್ತನ್ನು ಮಂಜೂರು ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ, 1ನೇ ಪ್ರತಿವಾದಿಗೆ ಮಾತ್ರ ಮಂಜೂರು ಆಗಿರುತ್ತದೆ. 1ನೇ ಪ್ರತಿವಾದಿಗೆ 80 ವರ್ಷ ವಯಸ್ಸಾಗಿದ್ದು, ಅವರ ಮಗ ವಾದಿಗೆ ಗೊತ್ತಾದರೆ ಆಸ್ತಿ ಮಾರಾಟ ಮಾಡುವುದಿಲ್ಲ ಎಂದು ವಾದಿಗೆ ಹೇಳದೆ ನಾವು ಸುಳ್ಳು ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಮಗ

ಇರುವ ಬಗ್ಗೆ ನಮಗೆ ಮಾಹಿತಿ ನೀಡಿರಲಿಲ್ಲ.

ವಾದಿಗಳಿಗೆ 1 ನೇ ಪ್ರತಿವಾದಿ ಕ್ರಯಪತ್ರ ಮಾಡಿಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಈ ದಾವೆಯ ನೋಟೀಸು ಬಂದ ನಂತರ ನಾವು ಪ್ರತಿವಾದಿಗಳನ್ನು ವಿಚಾರಿಸಿದಾಗ ನಮ್ಮ ಮಗ 30 ವರ್ಷಗಳ ಹಿಂದೆಯೇ ನಮ್ಮನ್ನು ಬಿಟ್ಟು ಹೋಗಿರುತ್ತಾನೆ ಅವನು ಎಲ್ಲಿರುತ್ತಾನೆ ಎಂದು ನನಗೆ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

1, 2 ನೇ ಪ್ರತಿವಾದಿಗಳು ಕ್ರಯಪತ್ರವಾದ 2 ವರ್ಷಗಳ ನಂತರ ಮೃತಪಟ್ಟಿರುತ್ತಾರೆ ಎಂದು ನಮಗೆ ಗೊತ್ತಾಗಿರುತ್ತದೆ.

ಈಗ ನೋಡುತ್ತಿರುವ ಪೋಟೋದಲ್ಲಿ 1 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಅದೇ ಪೋಟೋದಲ್ಲಿ 2 ನೇ ವಾದಿ ಸಹಃ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ಪೋಟೋವನ್ನು ಒಪ್ಪಿಕೊಂಡ ಮೇರೆಗೆ ಅದನ್ನು ರುಜುವಾತುಪಡಿಸುವ ಷರತ್ತಿಗೆ ಒಳಪಟ್ಟು ನಿಪಿ 7 ಎಂದು ಗುರುತಿಸಲಾಯಿತು.

ಅದೇ ರೀತಿ ಈಗ ನೋಡುತ್ತಿರುವ ಪೋಟೋದಲ್ಲಿ 1 ಮತ್ತು 3 ನೇ ಪ್ರತಿವಾದಿ ಇದ್ದಾರೆ. ಸಾಕ್ಷಿಯು ಸದರಿ ಪೋಟೋವನ್ನು ಒಪ್ಪಿಕೊಂಡ ಮೇರೆಗೆ ಅದನ್ನು ರುಜುವಾತುಪಡಿಸುವ ಷರತ್ತಿಗೆ ಒಳಪಟ್ಟು ನಿಪಿ 8 ಎಂದು ಗುರುತಿಸಲಾಯಿತು.

ಅದೇ ರೀತಿ ಈಗ ನೋಡುತ್ತಿರುವ ಪೋಟೋದಲ್ಲಿ 1 ನೇ ಮತ್ತು 2 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ಸಾಕ್ಷಿಯು ಸದರಿ ಪೋಟೋವನ್ನು ಒಪ್ಪಿಕೊಂಡ ಮೇರೆಗೆ ಅದನ್ನು ರುಜುವಾತುಪಡಿಸುವ ಷರತ್ತಿಗೆ ಒಳಪಟ್ಟು ನಿಪಿ 8 ಎಂದು ಗುರುತಿಸಲಾಯಿತು. ವಾದಿ ಮತ್ತು 1 ರಿಂದ 3 ನೇ ಪ್ರತಿವಾದಿಗಳು ಒಟ್ಟಿಗೆ ವಾಸಮಾಡುತ್ತಿದ್ದು ನಾನು ವಾದಿಯ ಗಮನಕ್ಕೆ ಬಾರದಂತೆ ಸುಳ್ಳು ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಕ್ರಯ ಪತ್ರಕ್ಕೆ ಯಾರು ಯಾರು ಸಾಕ್ಷಿದಾರರಾಗಿದ್ದಾರೆ ಎಂದರೆ ಮಂಜಣ್ಣ ಮತ್ತು ಇನ್ನೊರ್ವ ವ್ಯಕ್ತಿ ಸುದರ್ಶನ ರವರು ಸಾಕ್ಷಿಯಾಗಿದ್ದಾರೆ. 1 ರಿಂದ 3 ನೇ ಪ್ರತಿವಾದಿಗಳು ಹೆಬ್ಬೆಟ್ಟಿನ ರುಜು ಮಾಡಿರುತ್ತಾರೆ. 1 ರಿಂದ 3 ನೇ ಪ್ರತಿವಾದಿಗಳಿಗೆ ಓದು ಬರಹ ಬರುವುದಿಲ್ಲ ಎಂದರೆ ಸರಿ. ಕ್ರಯಪತ್ರದ ವಿಚಾರಗಳು 1 ರಿಂದ 3 ನೇ ಪ್ರತಿವಾದಿಗಳಿಗೆ ಗೊತ್ತಿಲ್ಲ ಎಂದರೆ ಅದನ್ನು ಓದಿ ಹೇಳಲಾಗಿರುತ್ತದೆ.

ನಿಡಿ 5 ರ ದೃಢೀಕರಣ ಪತ್ರವನ್ನು ನನ್ನ ತಂದೆ ಪಡೆದಿರುತ್ತಾರೆ. ನಿಡಿ 5 ನ್ನು ನೀಡಲು ಪುರಸಭೆಗೆ ನೀಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪುರಸಭೆಗೆ ನಿಡಿ 5 ನ್ನು ನೀಡುವ ಅಧಿಕಾರ ವ್ಯಾಪ್ತಿ ಇಲ್ಲ ಎಂದರೆ ಸರಿಯಲ್ಲ. ನಿಡಿ 5 ರಲ್ಲಿ ಸಿವಿಲ್ ತಕರಾರಿಗೆ ಪುರಸಭೆಯು ಜವಾಬ್ದಾರಿಯಾಗುವುದಿಲ್ಲ ಎಂದು ನಮೂದು ಇದೆ ಎಂದರೆ ಸರಿ. ದಾವಾ ಸ್ವತ್ತನ್ನು ಮಾರಾಟ ಮಾಡುವಂತಿಲ್ಲ ಎಂದು ಷರತ್ತು ಇದ್ದರು ಸಹಃ ಕಾನೂನು ಬಾಹಿರವಾಗಿ ನಾವು ಕ್ರಯಪತ್ರ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ವಾದಿಗಳು ಮತ್ತು 1 ರಿಂದ 3 ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.